**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.**5017/2024

**PW.** 1

**CW.** 3

**ಸಾಕ್ಷಿಯ ಹೆಸರು –ಸೋಮಸುಂದರ**

**ತಂದೆಯ ಹೆಸರು –ಲೇ ಮರಿಗೌಡ**

**ವಯಸ್ಸು –58 ವರ್ಷಗಳು** ದಿನಾಂಕ 17–03–2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ನೋಡಲ್ ಆಫಿಸರ್ , ನಗರ ಸಭೆ ಹುಣಸೂರು**

**ವಾಸಸ್ಥಳ –ಹುಣಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು 2009 ರಿಂದ ಇಲ್ಲಿಯವರೆಗೆ ನಗರ ಸಭೆ ಹುಣಸೂರಿನಲ್ಲಿ ನೋಡಲ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದೇನೆ.

ದಿಃ 30.10.2023 ರಂದು ಪೊಲೀಸರ ಕೋರಿಕೆಯ ಮೇರೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ಕೊಡಲು ಹೇಳಿದ್ದರು. ಅದರಂತೆ ಪೌರಾಯುಕ್ತರು ನನ್ನನ್ನು ನೇಮಕ ಮಾಡಿದ್ದು, ಪೊಲೀಸರ ಜೊತೆ ದಿಃ 16.11.2023 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಪೊಲೀಸರು ಸ್ಥಳ ತೋರಿಸಿದ ಮೇರೆಗೆ, ನಕಾಶೆ ತಯಾರಿಸಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ನಿಪಿ–1 ಎಂದು , ಕೃತ್ಯ ನಡೆದ ಸ್ಥಳವನ್ನು ನಿಪಿ–1(ಎ) ಎಂದು , ಸಾಕ್ಷಿಯ ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಸದರಿ ನಕಾಶೆಯನ್ನು ನಾನು ಪೌರಾಯುಕ್ತರಿಗೆ ನೀಡಿದ್ದು , ಅವರು ಕವಚಪತ್ರದೊಂದಿಗೆ ಪೊಲೀಸರಿಗೆ ನೀಡಿದ್ದಾರೆ.

**SC No.5017/2024**
**PW.1**

**ಪಾಟೀಸವಾಲುಃ– ಆರೋಪಿ ಪರ ಶ್ರೀಮತಿ ಎ ಕೆ ವಕೀಲರಿಂದಃ–**

ನಾನು ಪೊಲೀಸರ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ–1 ರ ನಕಾಶೆಯನ್ನು ನಾನು ಕಛೇರಿಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಅನೂಕೂಲಕ್ಕೆ ತಕ್ಕಂತೆ ನಿಪಿ–1 ಅನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.